<u>ಸಾಕ್ಷಿಗೆ ದಿನಾಂಕ *18-07-2025* ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಪಾಟೀ ಸವಾಲುಃ</u> 1 ನೇ ಎದುರುದಾರರ ಪರ ಶ್ರೀ ವಿ ಬಿ ಡಿ ವಕೀಲರಿಂದ.**

ಅಪಘಾತವಾದಾಗ ನನ್ನ ಗಂಡನಿಗೆ 35 ವರ್ಷ ಆಗಿತ್ತು ಎಂದು ತೋರಿಸಲು ದಾಖಲೆಗಳನ್ನು ಕೊಟ್ಟಿರುತ್ತೇನೆ. ನನ್ನ ಗಂಡನಿಗೆ 35 ವರ್ಷ ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಜೆ ಸಿ ಬಿ ಆಪರೇಟ ಮಾಡುತ್ತಿದ್ದ ಮತ್ತು ಅವನಿಗೆ ತಿಂಗಳಿಗೆ 35 ಸಾವಿರ ರೂ.ಗಳ ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಸದರಿ ಅಪಘಾತವು ಮೊದಲನೇ ಎದರುದಾರರ ತಪ್ಪಿನಿಂದ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಕೊಡಲು 1 ನೇಎದರುದಾರರು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ 4 ನೇ ಎದುರುದಾರರ ಪರ ಶ್ರೀ ಆರ್ ಕೆ ಬಿ ವಕೀಲರಿಂದ**

ದೊಡ್ಡಬಸಪ್ಪ ನನ್ನ ಮಾವ. ದೊಡ್ಡಬಸಪ್ಪ ರವರಿಗೆ 3 ಜನ ಗಂಡು ಮಕ್ಕಳು ಮತ್ತು ಒಬ್ಬಳು ಹೆಣ್ಣುಮಗಳು. ನನ್ನ ಗಂಡನನ್ನು ಹಿಡಿದು ದೊಡ್ಡಬಸಪ್ಪ ರವರಿಗೆ 3 ಜನ ಗಂಡು ಮಕ್ಕಳು. ನನ್ನಮಾವ ಮತ್ತು ಮೈದುನ ಕೂಡಿಯೇ ಇರುತ್ತಾರೆ. ನನ್ನ ಮೈದುನರು ದುಡಿದು ತಂದ ಹಣವನ್ನು ದೊಡ್ಡಬಸಪ್ಪ ರವರ ಕೈಯಲ್ಲಿ ಕೊಡುತ್ತಾರೆ.

ನಾನು ಅಪಘಾತವನ್ನು ಪ್ರತ್ಯಕ್ಷ್ಯವಾಗಿ ನೋಡಿರುವುದಿಲ್ಲ. ನನ್ನ ಮಾವ ದೂರು ನೀಡಿರುತ್ತಾರೆ. ದೂರಿನಲ್ಲಿ ಏನು ಬರೆದಿರುತ್ತಾರೆ ಎಂದು ಗೊತ್ತಿರುವುದಿಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳ ಬಗ್ಗೆ ತಿಳಿದುಕೊಂಡಿರುತ್ತೇನೆ. ನನ್ನ ಗಂಡ ತೆಗೆದುಕೊಂಡು ಹೊರಟಿದ್ದ ವಾಹನದ ಮುಂದಿನ ಭಾಗಕ್ಕೆ ಡ್ಯಾಮೇಜ ಆಗಿರುತ್ತದೆ ಎಂದು ವರದಿ ಕೊಟ್ಟಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮೋಟರ ಸೈಕಲ್ಲನ್ನು ನನ್ನ ಗಂಡ ಚಲಾಯಿಸುತ್ತಿದ್ದ ಮತ್ತು ಬಂದಗಿಸಾಬ ರವರು ಹಿಂದೆ ಕುಳಿತಿದ್ದರು. ಬಂದಗಿಸಾಬ ರವರಿಗೆ ಗಾಯಗಳು ಆಗಿರಲಿಲ್ಲ. ನನ್ನ ಗಂಡನಿಗೆ ವಾಹನ ಚಲಾಯಿಸಲು ಡಿ ಎಲ್ ಇರಲಿಲ್ಲ. ನನ್ನ ಗಂಡನಿಗೆ ವಾಹನ ಚಲಾಯಿಸಲು ಬರದೇ ಇರುವುದರಿಂದ ಅವರೇ ಹೋಗಿ ಕಾರಿಗೆ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನೇ ಹೋಗಿ ಡಿಕ್ಕಿ ಪಡಿಸಿರುತ್ತಾನೆ ಎಂದು ಬರೆಸಿದರೆ ಪರಿಹಾರ ಬರುವುದಿಲ್ಲ ಎಂದು ನನ್ನ ಮಾವ ದೂರಿನಲ್ಲಿ ಸುಳ್ಳಾಗಿ ಹಿಂದಿನಿಂದ ಡಿಕ್ಕಿ

ಆಗಿರುತ್ತದೆ ಎಂದು ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಕಾರಿನವರು ನನ್ನ ಗಂಡ ಚಲಾಯಿಸುತ್ತಿದ್ದ ವಾಹನದ ಹಿಂದಿನ ಭಾಗಕ್ಕೆ ಬಂದು ಡಿಕ್ಕಿ ಪಡಿಸಿರುತ್ತಾನೆ ಎಂದು ಸುಳ್ಳಾಗಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಗಂಡ ತೀರಿಕೊಂಡ ನಂತರ 75 ಸಾವಿರ ರೂ.ಗಳ ಖರ್ಚು ಬಂದಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಅಪಘಾತವಾದಾಗ 40 ವರ್ಷ ವಯಸ್ಸು ಆಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಪ್ರತಿ ತಿಂಗಳು 35 ಸಾವಿರ ರೂ.ಗಳ ಆದಾಯ ಇತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ನನ್ನ ಗಂಡ ಜೆಸಿಬಿ ಆಪರೇಟರ ಇದ್ದರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಜಮೀನುಗಳು ನನ್ನ ಮಾವನ ಹೆಸರಿನಲ್ಲಿ ಇರುತ್ತವೆ. ಮನೆಯ ದೆಖರಿಕೆಯನ್ನು ನನ್ನ ಮಾವ ನೋಡಿಕೊಳ್ಳುತ್ತಾರೆ. ಸದರಿ ಅಪಘಾತವು ನನ್ನ ಗಂಡನ ತಪ್ಪಿನಿಂದ ಆಗಿದ್ದರಿಂದ 4 ನೇ ಎದುರುದಾರರು ಪರಿಹಾರದ ಹಣವನ್ನು ಕೊಡಲು ಭಾದ್ಯಸ್ತರಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಚಲಾಯಿಸುತ್ತಿದ್ದ ವಾಹನಕ್ಕೆ ವಿಮೆ ಇರಲಿಲ್ಲ ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಪಡೆಯುವದಕ್ಕೊಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : 3 ನೇ ಎದರುದಾರರು ತಮ್ಮ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.